‘ಬರೀ ಐದು ಸಾವಿರ’

ಹಣದ ವಿಷಯ ಕೇಳಿದ ತಕ್ಷಣ ಪಾಂಡುರಂಗ ತನ್ನ ಕಿವಿಯ ಸ್ಪೀಕರ್ ಆಫ್ ಮಾಡಿಕೊಂಡು ಟೀವಿ ನೋಡುತ್ತಾ ಕುಳಿತುಬಿಟ್ಟ. ಪಮ್ಮು ಮುಖ ಊದಿಸಿಕೊಂಡು ಟೀವಿ ಆಫ್ ಮಾಡಿದಳು.

‘ಲೇ ಬೇಡ್ವೆ. ಸೊಂಟ, ಕೈ ಕಾಲು ಹಿಡಕೊಂಡು ಅಮೇಲೆ ಡಾಕ್ಟರ್ ಹತ್ತಿರ ಹೋಗಬೇಕಾಗುತ್ತೆ. ಈಗ ಸುಮ್ನೆ ಮಲಕ್ಕೋ ಹೋಗು. ಬೆಳಿಗ್ಗೆ ವಾಕಿಂಗ್ ಹೋಗಬೇಕು’.

‘ವಾಕಿಂಗ್ ಬೇಕಾದ್ರೆ ನೀವು ಹೋಗಿ. ನಾನಂತೂ ಗೂರೂಜಿ ಶಿಬಿರಕ್ಕೆ ಹೋಗುವವಳೇ. ನಮ್ಮ ಮಹಿಳಾ ಸಮಾಜದಿಂದಾನೇ 5–6 ಜನ ಬರ್ತಾ ಇದ್ದಾರೆ’ ಎಂದಳು.

ಮಾರನೇ ದಿನದಿಂದ ಹೊಸ ಅಧ್ಯಾಯ. ಕುಟರ್ ಕುಟರ್ ಎಂದು ಶಬ್ದ ಮಾಡುತ್ತಾ ಶಿಬಿರದತ್ತ ದೌಡಾಯಿಸಿತು ಅವನ ಪಾಪದ ಸ್ಕೂಟರ್. ಪಮ್ಮು



ವಿಜಯದ ಕಹಳೆ ಊದುತ್ತಾ ಒಳಗೆ ನಡೆದಳು.

ಒಂದು ನಾಲ್ಕು ದಿನ ಹೋಗಿರಬಹುದು, ಇದ್ದಕ್ಕಿದ್ದಂತೆ ಪಮ್ಮು ತನಗೆ ಅಗಾಧವಾದ ಮಂಡಿನೋವು, ಸೊಂಟಾನೋವೆಂದು ಮಲಗಿದವಳು ಏಳಲೇ ಇಲ್ಲ. ಏತನ್ಮಧ್ಯೆ ಇವಳ ನಂಟರ ಮದುವೆ ಬೇರೆ. ಕಷ್ಟಪಟ್ಟುಕೊಂಡು ಪಮ್ಮು ಪಾಂಡುರಂಗನನ್ನೂ ತಳ್ಳಿಕೊಂಡು ಹೊರಟೇಬಿಟ್ಟಳು. ಅವನ ಗ್ರಹಚಾರಕ್ಕೆ ಅವಳ ಸೋದರತ್ತೆ ಛತ್ರದ ಬಾಗಿಲಲ್ಲೇ ನಿಂತಿದ್ದವರು.

‘ಏನೇ ಪ್ರಮೀಳ. ಬರ್ತಾ ಬರ್ತಾ ನಿನ್ನ ಗಂಡ ನರಪೇತಲ ನಾರಾಯಣ ಆಗ್ತಾ ಇದಾರೆ. ನೀನು ಮಾತ್ರಾ ಆ ಸುಮೋದವರ ಜೊತೆ ಸ್ಪರ್ಧೆಗೆ ನಿಂತವಳ ಹಾಗೆ ಊದ್ತಾ ಇದೀಯ’ ಎಂದುಬಿಡೋದೆ?

ಅವಳ ಉತ್ಸಾಹವೆಲ್ಲಾ ಜರ್ರೆಂದು ಇಳಿದುಹೋಯಿತು. ಅವಳಿಗೆ ಊಟ ಮಾಡಲೂ ಮನಸ್ಸಾಗಲಿಲ್ಲ.

‘ನಿಜ ಹೇಳಿ. ನಾನು ಸ್ವಲ್ಪಾನೂ ಸಣ್ಣಾ ಆಗಿಲ್ವಾ... ಅತ್ತೆ ನೋಡಿ ಹೇಗೆ ಹೇಳ್ತಾರೆ?’

‘ಯಾವುದನ್ನಾದರೂ ನೆಟ್ಟಗೆ ಒಂದು ತಿಂಗಳು ಮಾಡಿದರೆ ಸರಿ ಹೋಗುತ್ತೆ. ನಾಲ್ಕು ದಿನ ಮಾಡಿ ಸಣ್ಣಾ ಆಗಿಲ್ವಾ ಅಂದ್ರೆ ಹೇಗಾಗುತ್ತೆ?’

‘ಮತ್ತೆ ನೀವು ಹೇಗೆ ಸಣ್ಣಾ ಆದ್ರಿ?’

‘ನಿನ್ನನ್ನ ಬಿಟ್ಟು ನಾನು ವಾಕಿಂಗ್ ಮಾಡ್ತಾ ಇದೀನಲ್ಲ. ಅದೂ ಅಲ್ದೆ ನನ್ನ ಬಾಡಿ ನೇಚರ್ರೇ ಹಾಗೆ ಕಣೆ’ ಎಂದ ಪಾಂಡುರಂಗ.

ಮನೆಯ ಯಜಮಾನ್ತಿ ಇವಳನ್ನು ನೋಡಿ – ‘ಇವಳು ನನಗೆ ತುಂಬಾ ಬೇಕಾದವಳು, ಇನ್ನೊಂದು ಸ್ವೀಟು ಹಾಕು’ ಎಂದು ಎರಡೆರಡು ಸ್ವೀಟು ಹಾಕಿಸಿದರು. ಇವಳು ವೇಸ್ಟ್ ಯಾಕೆ ಮಾಡುವುದು ಎಂದು ಹೊಟ್ಟೆಗೆ ತುರುಕಿಕೊಂಡಳು. ಇನ್ನು ಸಣ್ಣ ಹೇಗಾಗ್ತಾಳೆ?

ಮನೆಗೆ ಬಂದಮೇಲೆ, ‘ಇನ್ನು ಸಣ್ಣಗಾಗಲು ತಮ್ಮ ಮುಂದಿನ ಯೋಜನೆ ಏನು ಪ್ರಮೀಳಾದೇವಿಯವರೆ’ ಎಂದ ಪಾಂಡುರಂಗ.

ಪಮ್ಮಿ ಬಳಿ ಹೊಸ ಯೋಜನೆ ಸಿದ್ಧವಾಗಿಯೇ ಇತ್ತು. ‘ನಮ್ಮ ಮಹಿಳಾ ಸಮಾಜದವರೆಲ್ಲಾ ನೇಚರ್ ಕ್ಯೂರ್‌ಗೆ ಸೇರ್ತಾ ಇದೀವಿ. ನಾನು ವಾಪಸ್ಸು ಬಂದಾಗ ನಿಮಗೆ ಗುರ್ತೇ ಸಿಗಲ್ಲ.’

‘ನಾನಂತೂ ಒಂದು ಪೈಸೇನೂ ಕೊಡಲ್ಲ.’ ಪಾಂಡುರಂಗ ತನ್ನ ಅಸಹಾಯಕತೆ ತೋಡಿಕೊಂಡುಬಿಟ್ಟ.

‘ಬೇಡ. ನಿಮ್ಮ ಕ್ರೆಡಿಟ್ ಕಾರ್ಡ್ ನಂಬರ್ ಕೊಟ್ಟಿದ್ದೀನಿ. ಅದು ತಂತಾನೆ ಡೆಬಿಟ್ ಆಗುತ್ತೆ’ ಎಂದಳು ಪಮ್ಮು, ಸ್ವಲ್ಪವೂ ವಿಚಲಿತಳಾಗದೆ.

ಹನ್ನೊಂದನೆಯ ದಿನ ಪಮ್ಮು ನೇಚರ್ ಕ್ಯೂರ್ ಚಿಕಿತ್ಸೆಯ ನಂತರ ಮನೆಗೆ ಬಂದಳು. ಹದಿನೈದು ಸಾವಿರ ಖರ್ಚಾದರೂ ಪಮ್ಮು ಸ್ವಲ್ಪ ಸಣ್ಣಗೆ ಸೊರಗಿದಂತೆ ಕಾಣುತ್ತಿದ್ದಳು.

‘ಪಮ್ಮು, ನೀನು ಮೊದಲು ನಿಮ್ಮ ಸೋದರತ್ತೆ ಮನೆಗೆ ವಿಜಿಟ್ ಕೊಟ್ಟು ಬಾ. ಏನೆಂದುಕೊಂಡಿದ್ದಾರೆ ಅವರು ಪ್ರಮೀಳಾ ಅಂದ್ರೆ’ ಎಂದ.

ಇದೆಲ್ಲಾ ಆಗಿ ಒಂದಷ್ಟು ದಿನ ಕಳೆದವು. ಸದ್ಯ, ಪಮ್ಮು ತಲೆಗೆ ಹೊಸ ಐಡಿಯಾ ಹೊಳೆದಿರಲಿಲ್ಲ.

ಒಂದು ದಿನ ಸಂಜೆ ಪಾಂಡುರಂಗ ಮನೆಗೆ ಬರುವ ವೇಳೆಗೆ ಮನೆಯಲ್ಲಿ ಪಮ್ಮಿ ಪರಿವಾರ ಸೇರಿತ್ತು. ‘ಅಳಿಯಂದ್ರು ಬಂದ್ರು’ ಎಂದು ಅತ್ತೆ ಸೆರಗನ್ನು ಬಾಯಿಗೆ ಅಡ್ಡ ಇಟ್ಟುಕೊಂಡು ಕಳ್ಳನಗು ನಕ್ಕರೆ, ಮಾವನವರು ಅವನ ಬೆನ್ನು ಚಪ್ಪರಿಸಿ ನಕ್ಕರು. ಪಮ್ಮುವಿನ ಪತ್ತೆಯೇ ಇರಲಿಲ್ಲ. ರೂಮಿನ ಒಳಗಡಿಯಿಟ್ಟರೆ, ಅವನಿಗೆ ಕಾಣಿಸಿದ್ದೇನು – ಮಂಚದ ಮೇಲೆ ಪಟ್ಟಾಂಗ ಹಾಕಿಕೊಂಡು ತಟ್ಟೆ ತುಂಬಾ ಚಕ್ಕುಲಿ, ನಿಪ್ಪಟ್ಟು, ಕೋಡುಬಳೆ ರವೆ ಉಂಡೆ ಮುಕ್ಕುತ್ತ ಕುಳಿತಿದ್ದಾಳೆ ಮಡದಿ.

ಪಾಂಡುರಂಗನಿಗೆ ಕೋಪ ಉಕ್ಕೇರಿತು. ‘ನೀನು... ನೀನು... ಗುಜ್ಜಾನೆ ಮರಿ. ಡ್ರಮ್ಮು, ಕೊಳದಪ್ಪಲೆ, ರೋಡ್ ರೋಲರ್ರು...’

ಅವನ ಎಲ್ಲ ಬೈಗುಳಗಳಿಗೂ ಅವಳೂ ಮುಸಿ ಮುಸಿ ನಕ್ಕಳು. ಪಾಂಡುರಂಗನಿಗೆ ಮತ್ತಷ್ಟು ಆಶ್ಚರ್ಯ.

‘ರೀ...’

‘ಅದೇನು ಬೊಗಳು...’

‘ನಾನೇನು ನಾಯೀನಾ... ವಿಷ್ಯ ಕೇಳಿದ್ರೆ ನಿಮಗೂ ನಗು ಬರುತ್ತೆ.’

‘ಏನೇ ಅದು?’

‘ನಂಗೀಗ ಮೂರು ತಿಂಗಳು. ಅದಕ್ಕೆ ಈ ತಿಂಡೀ ಎಲ್ಲ. ಇನ್ನು ಮೇಲೆ ಡಯಟಿಂಗ್ ಇಲ್ಲ. ಬೇಕು ಬೇಕಾದ್ದು ತಿನ್ನಬಹುದು... ನೀವು ಅಪ್ಪಾ ಆಗ್ತಾ ಇದೀರ. ಅದ್ಯಾಕೆ ಹೀಗೆ ಬೆಪ್ಪನಾಗಿ ನೋಡ್ತಾ ಇದೀರಿ...’

ಪಾಂಡುರಂಗ ಸುಸ್ತಾಗಿ ಕುಳಿತುಬಿಟ್ಟ. ಎಲ್ಲಿತ್ತೋ ನಗು ನುಗ್ಗಿಕೊಂಡು ಬಂತು. ಅವನೂ ಮುಸಿ ಮುಸಿ ನಗಲು ಶುರು ಮಾಡಿದ.